# ಆಕಳಿಕೆ ಮತ್ತು ಸೀನು

التثاؤب والعطاس

< الكنادي >

ಅಲ್‌ಅಲ್ಲಾಮತೈನ್ ಇಬ್ನ್ ಬಾಝ್ ವಲ್‌ಅಲ್ಬಾನೀ

http://www.3llamteen.com

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

# التثاؤب والعطاس

موقع سلسلة العلامتين ابن باز والألباني

http://www.3llamteen.com

ترجمة: محمد حمزة البتوري

مراجعة: أبو بكر نذير السلفي

# ಆಕಳಿಕೆ ಮತ್ತು ಸೀನು

ಸ್ವಭಾವಗಳ ಪೈಕಿ ಕೆಲವು ಪ್ರಶಂಸಾರ್ಹವೂ, ಅಲ್ಲಾಹು ಇಷ್ಟಪಡುವಂತದ್ದೂ ಮತ್ತು ಕೆಲವು ಅನಿಷ್ಟಕರವೂ, ಅಲ್ಲಾಹು ಅಸಹ್ಯಪಡುವಂತದ್ದೂ ಇವೆಯೆಂದು ಶರೀಅತ್ ನಮಗೆ ವಿವರಿಸಿಕೊಟ್ಟಿದೆ. ಆಕಳಿಕೆಯ ಬಗ್ಗೆ ಹೇಳುವುದಾದರೆ ಅದು ಅನಿಷ್ಟಕರವಾದ ಒಂದು ಸ್ವಭಾವವಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳುತ್ತಾರೆ:

قال رَسُول اللَّهِ ﷺ: {إِنَّ اللَّهَ يُحِبُّ الْعُطَاسَ وَيَكْرَهُ التَّثَاؤُبَ...} رواه البخاري.

**“ಖಂಡಿತವಾಗಿಯೂ ಅಲ್ಲಾಹು ಸೀನುವುದನ್ನು ಇಷ್ಟಪಡುತ್ತಾನೆ ಮತ್ತು ಆಕಳಿಸುವುದನ್ನು ಅಸಹ್ಯಪಡುತ್ತಾನೆ.”** [ಅಲ್‌ಬುಖಾರಿ]

ಅಲ್‌ಕುರ್ತುಬೀ ಹೇಳುತ್ತಾರೆ:

إِنْ لَمْ يَكْظِمْ تَثَاؤُبَهُ ضَحِكَ الشَّيْطَانُ مِنْهُ، وَدَخَلَ فِي فَمِهِ، وَقِيلَ: إِنَّهُ يَتَقَيَّأُ فِي فَمِهِ.

**“ಅವನು ತನ್ನ ಆಕಳಿಕೆಯನ್ನು ಅದುಮಿ ಹಿಡಿಯದಿದ್ದರೆ ಶೈತಾನನು ಅವನನ್ನು ನೋಡಿ ನಗುವನು, ಮತ್ತು ಅವನ ಬಾಯೊಳಗೆ ಪ್ರವೇಶಿಸುವನು. ಹೀಗೆ ಹೇಳಲಾಗುತ್ತದೆ: ಅವನು (ಶೈತಾನನು) ಅವನ ಬಾಯೊಳಗೆ ವಾಂತಿ ಮಾಡುವನು.”**

ಅಬೂ ಸಈದ್ ಅಲ್‌ಖುದ್ರೀ(ﷺ) ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ) ರವರು ಹೇಳುತ್ತಾರೆ:

قال رَسُول اللَّهِ ﷺ: {إِذَا تَثَاوَبَ أَحَدُكُمْ فِي الصَّلَاةِ فَلْيَكْظِمْ مَا اسْتَطَاعَ فَإِنَّ الشَّيْطَانَ يَدْخُلُ} رواه مسلم.

**"ನಿಮ್ಮಲ್ಲೊಬ್ಬರು ನಮಾಝ್ ಮಾಡುವಾಗ ಆಕಳಿಸುವುದಾದರೆ ಅವನು ತನಗೆ ಸಾಧ್ಯವಾದಷ್ಟು ಅದನ್ನು ಅದುಮಿ ಹಿಡಿಯಲಿ. ಯಾಕೆಂದರೆ ಶೈತಾನನು (ಬಾಯೊಳಗೆ) ಪ್ರವೇಶಿಸುವನು." [ಮುಸ್ಲಿಮ್]**

ಇಬ್ನುಲ್ ಅರಬೀ(ﷺ) ಹೇಳುತ್ತಾರೆ:

تَشْتَدُّ كَرَاهَةُ التَّثَاؤُبِ فِي كُلِّ حَالٍ، وَخَصَّ الصَّلَاةَ لِأَنَّهَا أَوْلَى الْأَحْوَالِ

**"ಆಕಳಿಸುವುದರಲ್ಲಿರುವ ಕರಾಹತ್ ಎಲ್ಲ ವೇಳೆಗಳಲ್ಲೂ ಕಠಿಣವಾಗಿರುತ್ತದೆ. ಇಲ್ಲಿ ನಮಾಝ್‌ನ ವೇಳೆಯಲ್ಲಿ ಎಂದು ಪ್ರತ್ಯೇಕವಾಗಿ ಹೇಳಿರುವುದು ಅದು (ನಮಾಝ್‌ನ ವೇಳೆಯು) ವೇಳೆಗಳಲ್ಲೇ ಅತ್ಯುತ್ತಮ ವೇಳೆಯಾಗಿದೆ ಎಂಬುದರಿಂದಾಗಿದೆ."**

## ಆಕಳಿಸುವುದಕ್ಕಿರುವ ಕಾರಣಗಳು

ಅಬೂ ಹುರೈರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು:

**قال رَسُول اللَّهِ ﷺ: {فَأَمَّا التَّثَاؤُبُ فَإِنَّمَا هُوَ مِنَ الشَّيْطَانِ}** رواه البخاري.

**"...ಆಕಳಿಕೆಯ ಬಗ್ಗೆ ಹೇಳುವುದಾದರೆ ಅದು ಶೈತಾನನ ಕಡೆಯಿಂದ ಮಾತ್ರವಾಗಿದೆ." [ಅಲ್‌ಬುಖಾರಿ]**

ಪ್ರವಾದಿ(ﷺ)ರವರು ಹೇಳಿದರು:

**قال رَسُول اللَّهِ ﷺ: {التَّثَاؤُبُ مِنَ الشَّيْطَانِ}** رواه مسلم.

**"ಆಕಳಿಕೆಯ ಶೈತಾನನ ಕಡೆಯಿಂದಾಗಿದೆ." [ಮುಸ್ಲಿಮ್]**

ಪ್ರವಾದಿ(ﷺ)ರವರು ಆಕಳಿಸುವುದನ್ನು ಶೈತಾನನಿಗೆ ಸೇರಿಸಿ ಹೇಳಿರುವುದರಿಂದ, ಆಕಳಿಕೆಯನ್ನು ಶೈತಾನನಿಗೆ ಸೇರಿಸುವುದಕ್ಕಿರುವ ಶರೀಅತ್ತಿನ ಪ್ರಕಾರ ವರ್ಜಿಸಬೇಕಾದ ಕಾರಣಗಳು ಅದರಲ್ಲಿವೆಯೆಂಬುದು ಸ್ಪಷ್ಟವಾಗುತ್ತದೆ.

ಫದ್ಲುಲ್ಲಾಹ್ ಅಲ್‌ಜೀಲಾನೀ(﵀) ಹೇಳುತ್ತಾರೆ:

**وَلَا يَكُونُ التَّثَاؤُبُ إِلَّا مَعَ ثِقَلِ الْبَدَنِ وَامْتِلَائِهِ وَاسْتِرْخَائِهِ، وَهُوَ لَا يَمْتَلِئُ إِلَّا إِذَا اتَّبَعَ شَهْوَتَهُ وَتَوَسَّعَ فِي الْمَأْكَلِ، وَلَا يَتَّبِعُ الشَّهَوَاتِ إِلَّا مَنْ تَبِعَ الشَّيْطَانَ فِي كُلِّ مَا يَأْمُرُ بِهِ**

**"ದೇಹವು ಭಾರವಾಗುವುದರಿಂದ, ತುಂಬಿಕೊಳ್ಳುವುದರಿಂದ ಮತ್ತು ಸಡಿಲುಗೊಳ್ಳುವುದನ್ನು ಬಯಸುವುದರಿಂದಲೇ ಹೊರತು ಆಕಳಿಕೆಯು ಉಂಟಾಗುವುದಿಲ್ಲ. ತನ್ನ ದೇಹೇಚ್ಛೆಯನ್ನು ಹಿಂಬಾಲಿಸುವುದರಿಂದ ಮತ್ತು ಆಹಾರದಲ್ಲಿ ವೈಶಾಲ್ಯತೆ ತೋರಿಸುವುದರಿಂದಲೇ (ಅತಿಯಾಗಿ**

**ತಿನ್ನುವುದರಿಂದಲೇ) ಹೊರತು ದೇಹವು ತುಂಬಿಕೊಳ್ಳುವುದಿಲ್ಲ. ಶೈತಾನನು ಆದೇಶಿಸುವುದೆಲ್ಲವನ್ನೂ ಅನುಸರಿಸುವವನ ಹೊರತು ಇನ್ನಾರೂ ದೇಹೇಚ್ಛೆಯನ್ನು ಹಿಂಬಾಲಿಸುವುದೂ ಇಲ್ಲ.”**

## ಆಕಳಿಸುವುದು ಕರಾಹತ್ ಆಗಿರುವುದಕ್ಕಿರುವ ಕಾರಣಗಳು

ನಾವು ಆಕಳಿಸುವುದನ್ನು ಕರಾಹತ್ ಎಂದು ತೀರ್ಮಾನಿಸುವಂತೆ ಮಾಡಿದ ಅನೇಕ ಶರಈ ಕಾರಣಗಳಿವೆ. ಅವುಗಳು ಹೀಗಿವೆ:

1. ಅದೊಂದು ಕೆಟ್ಟ ಗುಣವಾಗಿದೆ. ಅಲ್ಲಾಹು ಅದನ್ನು ಅಸಹ್ಯಪಡುತ್ತಾನೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ.

قال رَسُول اللَّهِ ﷺ: {إِنَّ اللَّهَ يُحِبُّ الْعُطَاسَ وَيَكْرَهُ التَّثَاؤُبَ...} رواه البخاري.

**“ಅಲ್ಲಾಹು ಖಂಡಿತವಾಗಿಯೂ ಸೀನುವುದನ್ನು ಇಷ್ಟಪಡುತ್ತಾನೆ ಮತ್ತು ಆಕಳಿಸುವುದನ್ನು ಅಸಹ್ಯಪಡುತ್ತಾನೆ.” [ಅಲ್‌ಬುಖಾರಿ]**

2. ಅದು ಶೈತಾನನ ಕಡೆಯಿಂದಾಗಿದೆ. ಯಾವುದೆಲ್ಲ ಶೈತಾನನ ಕಡೆಯಿಂದಾಗಿದೆಯೋ ಅವೆಲ್ಲವೂ ಕೆಟ್ಟದ್ದಾಗಿವೆ.

قال رَسُول اللَّهِ ﷺ: {التَّثَاؤُبُ مِنَ الشَّيْطَانِ} رواه مسلم.

**“ಆಕಳಿಕೆಯು ಶೈತಾನನ ಕಡೆಯಿಂದಾಗಿದೆ.” [ಮುಸ್ಲಿಮ್]**

3. ಮನುಷ್ಯನು ಆಕಳಿಸುವುದನ್ನು ಕಾಣುವಾಗ ಶೈತಾನನು ನಗುತ್ತಾನೆ.

ಅಬೂ ಹುರೈರಃ(﵁)ರಿಂದ ವರದಿ. ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು:

قال رَسُول اللَّهِ ﷺ: {فَإِذَا تَثَاءَبَ أَحَدُكُمْ فَلْيَرُدَّهُ مَا اسْتَطَاعَ فَإِنَّ أَحَدَكُمْ إِذَا تَثَاءَبَ ضَحِكَ مِنْهُ الشَّيْطَانُ} رواه البخاري.

**“ನಿಮ್ಮಲ್ಲೊಬ್ಬರು ಆಕಳಿಸುವುದಾದರೆ ಅವನು ಅದನ್ನು ತನಗೆ ಸಾಧ್ಯವಾದಷ್ಟು ತಡೆಗಟ್ಟಲಿ. ಯಾಕೆಂದರೆ ನಿಮ್ಮಲ್ಲೊಬ್ಬನು ಆಕಳಿಸುವಾಗ ಶೈತಾನನು ಅದನ್ನು ಕಂಡು ನಗುತ್ತಾನೆ.” [ಅಲ್‌ಬುಖಾರಿ]**

ಇಬ್ನ್ ಬತ್ತಾಲ್(﵀) ಹೇಳುತ್ತಾರೆ:

إِنَّ الشَّيْطَانَ يُحِبُّ أَنْ يَرَى تَثَاؤُبَ الْإِنْسَانِ، لِأَنَّهَا تَغْيِيرٌ لِصُورَتِهِ. فَيَضْحَكُ مِنْ جَوْفِهِ

**“ಮನುಷ್ಯನು ಆಕಳಿಸುವುದನ್ನು ನೋಡಲು ಶೈತಾನನು ಇಷ್ಟಪಡುತ್ತಾನೆ. ಯಾಕೆಂದರೆ ಆ ಸಂದರ್ಭದಲ್ಲಿ ಅವನ (ಮನುಷ್ಯನ) ರೂಪವು ವಿರೂಪವಾಗುತ್ತದೆ. ಇದರಿಂದಾಗಿ ಶೈತಾನನು ಹೊಟ್ಟೆಯೊಳಗಿನಿಂದ ನಗುತ್ತಾನೆ.”**

4. ಅದು ಉದಾಸೀನತೆಯ ಚಿಹ್ನೆಯಾಗಿದೆ. ಹಾಗೆಯೇ ಕೆಲಸದ ಅಪೂರ್ಣತೆಗಿರುವ ಚಿಹ್ನೆಯಾಗಿದೆ. ಇದನ್ನು ಕಾಣುವಾಗ ಶೈತಾನನು ನಗುತ್ತಾನೆ. ಯಾಕೆಂದರೆ ಒಬ್ಬ ವ್ಯಕ್ತಿ ಆಕಳಿಸತೊಡಗಿದರೆ ಅವನು

ಇಬಾದತ್‌ಗಳನ್ನು ಮತ್ತು ಸತ್ಕರ್ಮಗಳನ್ನು ಮಾಡುವುದರಲ್ಲಿ ಉದಾಸೀನನಾಗುತ್ತಾನೆಂಬುದು ಶೈತಾನನಿಗೆ ತಿಳಿದಿದೆ.

ಅಲ್‌ಕುರ್ತುಬೀ(ﷺ) ಹೇಳುತ್ತಾರೆ:

فَإِنَّ ضَحْكَ الشَّيْطَانِ مِنْهُ سُخْرِيَّةٌ بِهِ، لِأَنَّهُ صَدَرَ مِنْهُ التَّثَاؤُبُ الَّذِي يَكُونُ عَنِ الْكَسَلِ. وَذَلِكَ كُلُّهُ يُرْضِيهِ، لِأَنَّهُ يَجِدُ بِهِ طَرِيقًا إِلَى التَّكْسِيلِ عَنِ الْخَيْرَاتِ وَالْعِبَادَاتِ.

**“ಶೈತಾನನು ಅವನನ್ನು (ಆಕಳಿಸುವವನನ್ನು) ನೋಡಿ ನಗುವುದು ಎಂದರೆ ಖಂಡಿತವಾಗಿಯೂ ಅದು ಅವನನ್ನು ಅಪಹಾಸ್ಯ ಮಾಡುವುದಾಗಿದೆ. ಯಾಕೆಂದರೆ ಉದಾಸೀನತೆಯ ಕಾರಣದಿಂದಾಗಿ ಉಂಟಾಗುವ ಆಕಳಿಕೆಯು ಅವನಿಂದ ಹೊರಹೊಮ್ಮಿದೆ. ಶೈತಾನನು ಇವೆಲ್ಲವನ್ನೂ ಇಷ್ಟಪಡುತ್ತಾನೆ. ಯಾಕೆಂದರೆ ಸತ್ಕರ್ಮಗಳನ್ನು ಮತ್ತು ಇಬಾದತ್‌ಗಳನ್ನು ಮಾಡುವುದರಲ್ಲಿ ಉದಾಸೀನತೆಯನ್ನುಂಟು ಮಾಡಲು ಇದರಿಂದಾಗಿ ಶೈತಾನನು ಒಂದು ದಾರಿಯನ್ನು ಕಂಡುಕೊಳ್ಳುತ್ತಾನೆ.”**

## ಆಕಳಿಸುವಾಗ ಏನು ಮಾಡಬೇಕು?

ಅಬೂ ಹುರೈರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು:

{وَأَمَّا التَّثَاؤُبُ فَإِنَّمَا هُوَ مِنَ الشَّيْطَانِ، فَإِذَا تَثَاءَبَ أَحَدُكُمْ فَلْيَرُدَّهُ مَا اسْتَطَاعَ} رواه البخاري.

"ಆಕಳಿಕೆಯ ಬಗ್ಗೆ ಹೇಳುವುದಾದರೆ ಅದು ಶೈತಾನನ ಕಡೆಯಿಂದ ಮಾತ್ರವಾಗಿದೆ. ಆದ್ದರಿಂದ ನಿಮ್ಮಲ್ಲೊಬ್ಬರು ಆಕಳಿಸುವುದಾದರೆ ಅವನು ತನಗೆ ಸಾಧ್ಯವಾಗಷ್ಟು ಅದನ್ನು ತಡೆಗಟ್ಟಲಿ." [ಅಲ್‌ಬುಖಾರಿ]

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

قَالَ الْعُلَمَاءُ: إِذَا أَرَدْتَ أَنْ تَكْظِمَهُ فَعُضَّ عَلَى شَفَتِكَ السُّفْلَى، وَلَيْسَ عَضًّا شَدِيدًا فَتَنْقَطِعَ، وَلَكِنْ لِأَجْلِ أَنْ تَضُمَّهَا حَتَّى لَا تَفْتَتِحَ. فَالْمُهِمُّ أَنْ تَكْظِمَ سَوَاءً بِهَذِهِ الطَّرِيقَةِ أَوْ بِغَيْرِهَا، فَإِنْ عَجَزْتَ عَنِ الْكَظْمِ فَتَضَعُ يَدَكَ عَلَى فَمِكَ.

"ಉಲಮಾಗಳು ಹೇಳುತ್ತಾರೆ: ನೀನು ಅದನ್ನು (ಆಕಳಿಕೆಯನ್ನು) ಅದುಮಿ ಹಿಡಿಯಲು ಉದ್ದೇಶಿಸುವುದಾದರೆ, ನಿನ್ನ ಕೆಳಗಿನ ತುಟಿಯನ್ನು ಕಚ್ಚಿ ಹಿಡಿದುಕೋ. ಬಿಗಿಯಾಗಿ ಕಚ್ಚುವುದಲ್ಲ. ಯಾಕೆಂದರೆ ಅದರಿಂದ ತುಟಿಗೆ ಗಾಯವಾಗಬಹುದು. ಆದರೆ ತುಟಿಗಳು ತೆರೆದುಕೊಳ್ಳದಂತೆ ಅದನ್ನು ಮುಚ್ಚಿಡುವಷ್ಟು ಕಚ್ಚಬೇಕು. ಇಲ್ಲಿ ಮುಖ್ಯವಾಗಿರುವ ವಿಷಯವೇನೆಂದರೆ ನೀನು ಅದನ್ನು ಅದುಮಿ ಹಿಡಿಯಬೇಕು ಎಂಬುದಾಗಿದೆ. ಅದು ಈ ವಿಧಾನದಿಂದಲೋ ಬೇರೆ ವಿಧಾನದಿಂದಲೋ ಆಗಬಹುದು. ನಿನಗೆ ಅದುಮಿ ಹಿಡಿಯಲು ಸಾಧ್ಯವಾಗದೆ ಹೋದರೆ ನಿನ್ನ ಕೈಯನ್ನು ಬಾಯಿಯ ಮೇಲಿಡಬೇಕು."

ಅಶ್ಶೈಖ್ ಅಬ್ದುರ್ರಝ್ಝಾಕ್ ಅಲ್ಅಬ್ಬಾದ್(ﷺ) ಹೇಳುತ್ತಾರೆ:

وَلَا يَلِيقُ بِالْمُسْلِمِ أَنْ يَتَثَاءَبَ مَفْتُوحَ الْفَمِ دُونَ وَضْعِ يَدِهِ أَوْ شَيْءٍ مِنْ لِبَاسِهِ عَلَى فَمِهِ. فَإِنَّ هَذَا إِضَافَةٌ إِلَى مَا فِيهِ مِنْ قُبْحٍ فِي الْهَيْئَةِ وَالْمَنْظَرِ فَإِنَّهُ ذَرِيعَةٌ وَسَبِيلٌ لِدُخُولِ الشَّيْطَانِ.

**"ಕೈಯನ್ನೋ ಅಥವಾ ಉಡುಪು ಮುಂತಾದ ವಸ್ತುಗಳನ್ನೋ ಬಾಯಿಯ ಮೇಲಿಡದೆ (ಬಾಯಿಗೆ ಅಡ್ಡವಾಗಿಡದೆ) ಬಾಯಿಯನ್ನು ತೆರೆದು ಆಕಳಿಸುವುದು ಮುಸ್ಲಿಮನಿಗೆ ಹೊಂದಿಕೊಳ್ಳುವಂತದ್ದಲ್ಲ. ಖಂಡಿತವಾಗಿಯೂ ಇದು ಇದರಲ್ಲಿರುವ ವಿಕಾರವಾದ ರೂಪ ಮತ್ತು ನೋಟದ ಹೊರತಾಗಿಯೂ ಶೈತಾನನ ಪ್ರವೇಶಕ್ಕಿರುವ ಒಂದು ಕಾರಣವೂ ದಾರಿಯೂ ಆಗಿದೆ."**

ಇಲ್ಲಿ ಬಾಯಿಗೆ ಅಡ್ಡವಾಗಿ ಎಡಗೈಯನ್ನಿಡಬೇಕು ಎಂಬುದಕ್ಕೆ ಉಲಮಾಗಳ ಬಳಿ ಸುಪ್ರಸಿದ್ಧವಾಗಿರುವ ಈ ಕೆಳಗಿನ ನಿಯಮವನ್ನು ಪುರಾವೆಯಾಗಿ ನೀಡಲಾಗುತ್ತದೆ:

مَا كَانَ لِلتَّكْرِيمِ بُدِئَ فِيهِ بِالْيَمِينِ وَخِلَافُهُ بِالْيَسَارِ

**"ಗೌರವ ನೀಡಬೇಕಾದ ವಿಷಯಗಳನ್ನು ಬಲಭಾಗದಿಂದ ಆರಂಭಿಸಲಾಗುತ್ತದೆ ಮತ್ತು ಅದಕ್ಕೆ ವಿರುದ್ಧವಾಗಿರುವುದನ್ನು ಎಡಭಾಗದಿಂದ ಆರಂಭಿಸಲಾಗುತ್ತದೆ."**

## ಸೀನು

ಅಬೂ ಹುರೈರಃ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

{إِنَّ اللَّهَ يُحِبُّ الْعُطَاسَ وَيَكْرَهُ التَّثَاؤُبَ، فَإِذَا عَطَسَ فَحَمِدَ اللَّهَ فَحَقٌّ عَلَى كُلِّ مُسْلِمٍ أَنْ يُشَمِّتَهُ } رواه البخاري.

**"ಅಲ್ಲಾಹು ಖಂಡಿತವಾಗಿಯೂ ಸೀನುವುದನ್ನು ಇಷ್ಟಪಡುತ್ತಾನೆ ಮತ್ತು ಆಕಳಿಸುವುದನ್ನು ಅಸಹ್ಯಪಡುತ್ತಾನೆ. ಒಬ್ಬ ವ್ಯಕ್ತಿ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ (ಯರ್ಹಮುಕಲ್ಲಾಹ್ ಎಂದು) ಹೇಳುವುದು ಪ್ರತಿಯೊಬ್ಬ ಮುಸ್ಲಿಮನಿಗಿರುವ ಹಕ್ಕಾಗಿದೆ" [ಅಲ್‌ಬುಖಾರಿ]**

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

إِنَّ اللَّهَ يُحِبُّ الْعُطَاسَ، وَالسَّبَبُ فِي ذَلِكَ أَنَّ الْعُطَاسَ يَدُلُّ عَلَى النَّشَاطِ وَالْخِفَّةِ، وَلِهَذَا تَجِدُ الْإِنْسَانَ إِذَا عَطَسَ نَشَطَ. وَاللَّهُ سُبْحَانَهُ وَتَعَالَى يُحِبُّ الْإِنْسَانَ النَّشِيطَ الْجَادَّ. وَفِي الصَّحِيحِ عَنِ النَّبِيِّ ﷺ أَنَّهُ قَالَ: «الْمُؤْمِنُ الْقَوِيُّ أَحَبُّ إِلَى اللَّهِ مِنَ الْمُؤْمِنِ الضَّعِيفِ وَفِي كُلٍّ خَيْرٌ». وَالْعُطَاسُ يَدُلُّ عَلَى الْخِفَّةِ وَالنَّشَاطِ، وَلِهَذَا كَانَ مَحْبُوبًا إِلَى اللَّهِ. وَكَانَ مَشْرُوعًا لِلْإِنْسَانِ إِذَا عَطَسَ أَنْ يَقُولَ: الْحَمْدُ لِلَّهِ. لِأَنَّهَا نِعْمَةٌ أَعْطَاهَا فَلْيَحْمَدِ اللَّهَ عَلَيْهَا.

**"ಖಂಡಿತವಾಗಿಯೂ ಅಲ್ಲಾಹು ಸೀನುವುದನ್ನು ಇಷ್ಟಪಡುತ್ತಾನೆ. ಇದಕ್ಕಿರುವ ಕಾರಣವೇನೆಂದರೆ ಸೀನು ಚುರುಕನ್ನು ಮತ್ತು ಹಗುರವಾಗುವುದನ್ನು ಸೂಚಿಸುತ್ತದೆ. ಈ ಕಾರಣದಿಂದಲೇ ಮನುಷ್ಯನು**

ಸೀನುವಾಗ ಚುರುಕಾಗುತ್ತಾನೆ. ಚುರುಕಾಗಿರುವ ಮತ್ತು ಸಕ್ರಿಯವಾಗಿರುವ ವ್ಯಕ್ತಿಯನ್ನು ಅಲ್ಲಾಹು ಸುಬ್‌ಹಾನಹು ವತಆಲಾ ಇಷ್ಟಪಡುತ್ತಾನೆ. ಸಹೀಹ್ ಗ್ರಂಥದಲ್ಲಿರುವ ಹದೀಸೊಂದರಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ: "ಅಲ್ಲಾಹು ಬಲಶಾಲಿಯಾದ ವಿಶ್ವಾಸಿಯನ್ನು ಬಲಹೀನನಾದ ವಿಶ್ವಾಸಿಗಿಂತಲೂ ಹೆಚ್ಚು ಇಷ್ಟಪಡುತ್ತಾನೆ. ಅವರೆಲ್ಲರಲ್ಲೂ ಒಳಿತಿದೆ." ಸೀನು ಹಗುರವಾಗುವುದನ್ನು ಮತ್ತು ಚುರುಕನ್ನು ಸೂಚಿಸುತ್ತದೆ. ಆದ್ದರಿಂದಲೇ ಅದು ಅಲ್ಲಾಹನಿಗೆ ಇಷ್ಟಕರವಾಗಿದೆ. ಒಬ್ಬ ವ್ಯಕ್ತಿ ಸೀನಿದರೆ ಅವನು 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳುವುದನ್ನು ಅವನಿಗೆ ಶರೀಅತ್ ಆಗಿ ಮಾಡಲಾಗಿದೆ. ಯಾಕೆಂದರೆ ಅದು ಅಲ್ಲಾಹು ದಯಪಾಲಿಸಿದ ಒಂದು ಅನುಗ್ರಹವಾಗಿರುವುದರಿಂದ ಅವನು ಅದಕ್ಕಾಗಿ ಅಲ್ಲಾಹನನ್ನು ಸ್ತುತಿಸಬೇಕಾಗಿದೆ."

## ಗಟ್ಟಿಯಾಗಿ ಸ್ತುತಿಸುವುದು ಪ್ರೋತ್ಸಾಹನೀಯ

ಅಬೂ ಹುರೈರಃ(﵁)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

{إِنَّ اللَّهَ يُحِبُّ الْعُطَاسَ وَيَكْرَهُ التَّثَاؤُبَ، فَإِذَا عَطَسَ فَحَمِدَ اللَّهَ فَحَقٌّ عَلَى كُلِّ مُسْلِمٍ أَنْ يُشَمِّتَهُ} رواه البخاري.

"ಅಲ್ಲಾಹು ಖಂಡಿತವಾಗಿಯೂ ಸೀನುವುದನ್ನು ಇಷ್ಟಪಡುತ್ತಾನೆ ಮತ್ತು ಆಕಳಿಸುವುದನ್ನು ಅಸಹ್ಯಪಡುತ್ತಾನೆ. ಒಬ್ಬ ವ್ಯಕ್ತಿ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಹೇಳುವುದು ಪ್ರತಿಯೊಬ್ಬ ಮುಸ್ಲಿಮನಿಗಿರುವ ಹಕ್ಕಾಗಿದೆ" [ಅಲ್‌ಬುಖಾರಿ]

ಅಲ್‌ಕುರ್ತುಬೀ(ﷺ) ಹೇಳುತ್ತಾರೆ:

فِي حَدِيثِ الْبُخَارِيِّ: «وَكَانَ حَقًّا عَلَى كُلِّ مَنْ سَمِعَهُ أَنْ يُشَمِّتَهُ» يَدُلُّ عَلَى أَنَّ الْعَاطِسَ يَنْبَغِي لَهُ أَنْ يُسْمِعَ صَوْتَهُ لِحَاضِرِيهِ.

**“ಸಹೀಹುಲ್ ಬುಖಾರಿಯಲ್ಲಿರುವ ಹದೀಸಿನಲ್ಲಿ ಹೀಗಿದೆ: “ಅದನ್ನು (ಅಲ್‌ಹಮ್ದುಲಿಲ್ಲಾಹ್ ಹೇಳುವುದನ್ನು) ಆಲಿಸಿದ ಪ್ರತಿಯೊಬ್ಬರ ಮೇಲೂ ಅವನಿಗೆ ತಶ್ಮೀತ್ ಹೇಳುವುದು ಹಕ್ಕಾಗಿದೆ.” ಸೀನಿದವನು ತನ್ನ ಧ್ವನಿಯು ಅಲ್ಲಿ ಉಪಸ್ಥಿತರಿರುವವರಿಗೆ ಕೇಳಿಸುವಂತೆ (ಅಲ್‌ಹಮ್ದುಲಿಲ್ಲಾಹ್) ಹೇಳಬೇಕಾಗಿದೆ.”**

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

وَلَا بُدَّ أَنْ يَكُونَ حَمْدُ الْعَاطِسِ مَسْمُوعًا.

**“ಸೀನಿದವನ ಸ್ತುತಿಯು ಇತರರಿಗೆ ಕೇಳಿಸುವಂತೆಯೇ ಇರಬೇಕಾದುದು ಅನಿವಾರ್ಯವಾಗಿದೆ.”**

## ಸ್ತುತಿಸುವ ರೂಪಗಳು

1. ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳುವುದು:

ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ} رواه البخاري.

**"ನಿಮ್ಮಲ್ಲೊಬ್ಬರು ಸೀನಿದರೆ ಅವನು 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳಲಿ." [ಅಲ್‌ಬುಖಾರೀ]**

2. 'ಅಲ್‌ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್' ಎಂದು ಹೇಳುವುದು:

ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ عَلَى كُلِّ حَالٍ... } رواه الترمذي وصححه الألباني.

**"ನಿಮ್ಮಲ್ಲೊಬ್ಬರು ಸೀನಿದರೆ ಅವನು 'ಅಲ್‌ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್' ಎಂದು ಹೇಳಲಿ..." [ಅತ್ತಿರ್ಮಿದಿ. ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ]**

3. 'ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್' ಎಂದು ಹೇಳುವುದು:

ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ رَبِّ الْعَالَمِينَ... } رواه الطبراني والحاكم وصححه الألباني.

**"ನಿಮ್ಮಲ್ಲೊಬ್ಬರು ಸೀನಿದರೆ ಅವನು 'ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್' ಎಂದು ಹೇಳಲಿ..." [ಅತ್ತಬರಾನೀ ಮತ್ತು ಅಲ್‌ಹಾಕಿಮ್. ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ]**

4. ‘ಅಲ್‌ಹಮ್ದುಲಿಲ್ಲಾಹಿ ಹಮ್ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ ಮುಬಾರಕನ್ ಅಲೈಹಿ ಕಮಾ ಯುಹಿಬ್ಬು ರಬ್ಬುನಾ ವಯರ್ದಾ’ ಎಂದು ಹೇಳುವುದು:

ರಿಫಾಅಃ ಇಬ್ನ್ ರಾಫಿಅ್(ﷺ)ರಿಂದ ವರದಿ:

صَلَّيْتُ خَلْفَ رَسُولِ اللَّهِ ﷺ فَعَطَسْتُ فَقُلْتُ: الْحَمْدُ لِلَّهِ حَمْدًا كَثِيرًا طَيِّبًا مُبَارَكًا فِيهِ مُبَارَكًا عَلَيْهِ كَمَا يُحِبُّ رَبُّنَا وَيَرْضَى. رواه الترمذي وحسنه الألباني.

**“ಒಮ್ಮೆ ರಸೂಲುಲ್ಲಾಹಿ(ﷺ)ರವರ ಹಿಂದೆ ನಮಾಝ್ ಮಾಡುತ್ತಿರುವಾಗ ನಾನು ಸೀನಿದೆ. ನಂತರ ಹೀಗೆ ಹೇಳಿದೆ: “ಅಲ್‌ಹಮ್ದುಲಿಲ್ಲಾಹಿ ಹಮ್ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ ಮುಬಾರಕನ್ ಅಲೈಹಿ ಕಮಾ ಯುಹಿಬ್ಬು ರಬ್ಬುನಾ ವಯರ್ದಾ’.” [ಅತ್ತಿರ್ಮಿದಿ. ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ]**

ಅನ್ನವವೀ(ﷺ) ಹೇಳುತ್ತಾರೆ:

اتَّفَقَ الْعُلَمَاءُ عَلَى أَنَّهُ يَسْتَحِبُّ لِلْعَاطِسِ أَنْ يَقُولَ عَقِبَ عُطَاسِهِ: الْحَمْدُ لِلَّهِ. فَلَوْ قَالَ: الْحَمْدُ لِلَّهِ رَبِّ الْعَالَمِينَ كَانَ أَحْسَنُ، وَلَوْ قَالَ: الْحَمْدُ لِلَّهِ عَلَى كُلِّ حَالٍ كَانَ أَفْضَلُ.

**“ಸೀನಿದವನು ಸೀನಿದ ತಕ್ಷಣ ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳುವುದು ಪ್ರೋತ್ಸಾಹನೀಯವಾಗಿದೆಯೆಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಅವನು ‘ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್**

ಆಲಮೀನ್' ಎಂದು ಹೇಳುವುದಾದರೆ ಅದು ಉತ್ತಮವಾಗಿದೆ. ಅವನು 'ಅಲ್‌ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್' ಎಂದು ಹೇಳುವುದಾದರೆ ಅದು ಶ್ರೇಷ್ಠಕರವಾಗಿದೆ."

ಇಬ್ನ್ ಜರೀರ್(ﷺ) ಹೇಳುತ್ತಾರೆ:

هُوَ مُخَيَّرٌ بَيْنَ هَذَا كُلِّهِ.

"ಅವನು (ಸೀನಿದವನು) ಇವುಗಳಲ್ಲಿ ಯಾವುದನ್ನು ಬೇಕಾದರೂ ಆರಿಸಬಹುದಾಗಿದೆ."

## ಅಲ್ಲಾಹನನ್ನು ಸ್ತುತಿಸುವುದರಲ್ಲಿರುವ ಹಿಕ್ಮತ್

ಇಬ್ನುಲ್ ಕಯ್ಯಿಮ್(ﷺ) ಹೇಳುತ್ತಾರೆ:

وَلَمَّا كَانَ الْعَاطِسُ قَدْ حَصَلَتْ لَهُ بِالْعُطَاسِ نِعْمَةٌ وَمَنْفَعَةٌ بِخُرُوجِ الْأَبْخِرَةِ الْمُحْتَقِنَةِ فِي دِمَاغِهِ الَّتِي لَوْ بَقِيَتْ فِيهِ أَحْدَثَتْ لَهُ أَدْوَاءً عَسِرَةً، شَرَعَ لَهُ حَمْدُ اللَّهِ عَلَى هَذِهِ النِّعْمَةِ مَعَ بَقَاءِ أَعْضَائِهِ عَلَى الْتِئَامِهَا وَهَيْئَتِهَا بَعْدَ هَذِهِ الزَّلْزَلَةِ الَّتِي هِيَ لِلْبَدَنِ كَزَلْزَلَةِ الْأَرْضِ لَهَا.

"ಸೀನುವವನಿಗೆ ಸೀನುವ ಮೂಲಕ ಅವನ ಮೆದುಳಿನಲ್ಲಿ ನಿಬಿಡವಾಗಿರುವ ಆವಿಯು ಹೊರ ಹೋಗುವ ಮೂಲಕ ಅವನಿಗೆ ಅನುಗ್ರಹ ಮತ್ತು ಪ್ರಯೋಜನವು ಲಭ್ಯವಾಗುವುದರಿಂದ –ಆ ಆವಿಯು ಅವನ ಮೆದುಳಿನಲ್ಲೇ

ಉಳಿದರೆ ಅವನಿಗೆ ಅದು ಕಡು ರೋಗಗಳನ್ನು ಉಂಟುಮಾಡುತ್ತಿದ್ದವು– ಈ ಅನುಗ್ರಹಕ್ಕಾಗಿ ಮತ್ತು ಭೂಮಿಯು ಕಂಪಿಸುವಂತೆ ಈ (ಸೀನುವಿಕೆಯಿಂದಾಗಿ) ದೇಹವು ಕಂಪಿಸಿದ ಬಳಿಕ ಅದನ್ನು ಅದರ ಮೂಲ ರೂಪದಲ್ಲಿ ಮತ್ತು ಆಕೃತಿಯಲ್ಲಿ ಉಳಿಸಿದ್ದಕ್ಕಾಗಿ ಅವನು ಅಲ್ಲಾಹನನ್ನು ಸ್ತುತಿಸಬೇಕೆಂಬುದನ್ನು ಅವನಿಗೆ ಶರೀಅತ್ ಆಗಿ ಮಾಡಲಾಗಿದೆ.”

ಡಾ। ಅಬ್ದುರ್ರಝ್ಝಾಕ್ ಅಲ್‌ಕೀಲಾನೀ(ﷺ) ಹೇಳುತ್ತಾರೆ:

الْعُطَاسُ هُوَ عَكْسُ التَّثَاؤُبِ فَهُوَ زَفِيرٌ قَوِيٌّ يَخْرُجُ مَعَهُ الْهَوَاءُ مِنَ الرِّئَتَيْنِ عَنْ طَرِيقَيِ الْأَنْفِ وَالْفَمِ. فَيَجْرُفُ مَعَهُ مَا فِي طَرِيقِهِ مِنَ الْغُبَارِ وَالْهَبَاءِ وَالْهَوَامِّ وَالْجَرَاثِيمِ، الَّتِي تَسَرَّبَتْ سَابِقًا إِلَى جِهَازِ التَّنَفُّسِ. وَلِذَلِكَ كَانَ مِنَ الطَّبِيعِيِّ أَنْ يَكُونَ الْعُطَاسُ مِنَ الرَّحْمَةِ لِأَنَّ فِيهِ فَائِدَةٌ لِلْجِسْمِ.

“ಸೀನುವುದು ಆಕಳಿಸುವುದಕ್ಕೆ ತದ್ವಿರುದ್ಧವಾಗಿದೆ. ಯಾಕೆಂದರೆ ಸೀನುವಿಕೆಯು ಒಂದು ಪ್ರಬಲವಾದ ನಿಶ್ವಾಸವಾಗಿದೆ. ಅದರೊಂದಿಗೆ ಶ್ವಾಸಕೋಶದಲ್ಲಿರುವ ಗಾಳಿಯು ಮೂಗು ಮತ್ತು ಬಾಯಿಯೆಂಬ ಎರಡು ದಾರಿಗಳ ಮೂಲಕ ಹೊರಹೋಗುತ್ತದೆ. ಆಗ ಅದು ಅದರ ದಾರಿಯಲ್ಲಿರುವ ಮತ್ತು ಶ್ವಾಸಕೋಶದ ವ್ಯವಸ್ಥೆಯೊಳಗೆ ಅಡಗಿರುವ ಧೂಳು, ರೇಣು, ಕ್ರಿಮಿಗಳು ಮತ್ತು ಸೂಕ್ಷ್ಮ ಜೀವಾಣುಗಳನ್ನು ಜೊತೆಗೆ ಒಯ್ಯುತ್ತವೆ. ಆದ್ದರಿಂದ ಸ್ವಾಭಾವಿಕವಾಗಿಯೂ ಸೀನುವಿಕೆಯು ಒಂದು ಅನುಗ್ರಹವಾಗಿದೆ. ಯಾಕೆಂದರೆ ಅದರಲ್ಲಿ ದೇಹಕ್ಕೆ ಪ್ರಯೋಜನವಿದೆ.”

## ಹೆಚ್ಚುವರಿಯಾಗಿ ಸ್ತುತಿಸುವುದು

ನಾಫಿಅ್(﵁) ಹೇಳುತ್ತಾರೆ:

عَطَسَ رَجُلٌ إِلَى جَانِبِ ابْنِ عُمَرَ ﵄ فَقَالَ: الْحَمْدُ لِلَّهِ وَالسَّلَامُ عَلَى رَسُولِ اللَّهِ. فَقَالَ ابْنُ عُمَرَ: وَأَنَا أَقُولُ: الْحَمْدُ لِلَّهِ وَالسَّلَامُ عَلَى رَسُولِ اللَّهِ. وَلَيْسَ هَكَذَا عَلَّمَنَا رَسُولُ اللَّهِ ﷺ. عَلَّمَنَا أَنْ نَقُولَ: الْحَمْدُ لِلَّهِ عَلَى كُلِّ حَالٍ.

"ಇಬ್ನ್ ಉಮರ್‌ರವರ ಬಳಿ ಒಬ್ಬ ವ್ಯಕ್ತಿ ಸೀನಿದ ಬಳಿಕ 'ಅಲ್‌ಹಮ್ದುಲಿಲ್ಲಾಹಿ ವಸ್ಸಲಾಮು ಅಲಾ ರಸೂಲಿಲ್ಲಾಹ್' ಎಂದು ಹೇಳಿದರು. ಆಗ ಇಬ್ನ್ ಉಮರ್ ಹೇಳಿದರು: ನಾನು ಸಹ 'ಅಲ್‌ಹಮ್ದುಲಿಲ್ಲಾಹಿ ವಸ್ಸಲಾಮು ಅಲಾ ರಸೂಲಿಲ್ಲಾಹ್' ಎಂದು ಹೇಳುತ್ತಿದ್ದೆ. ಆದರೆ ರಸೂಲುಲ್ಲಾಹಿ(ﷺ)ರವರು ನಮಗೆ ಹೀಗೆ ಹೇಳಲು ಕಲಿಸಿಕೊಟ್ಟಿಲ್ಲ. ಅವರು ಕಲಿಸಿಕೊಟ್ಟಿರುವುದು 'ಅಲ್‌ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್' ಎಂದು ಹೇಳುವುದನ್ನಾಗಿದೆ." [ಅತ್ತಿರ್ಮಿದಿ. ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ]

ಅಶ್ಶೈಖ್ ಅಲ್‌ಅಲ್ಬಾನೀ(ﷀ) ಹೇಳುತ್ತಾರೆ:

ثَبَتَ عَنِ ابْنِ عُمَرَ ﵄ إِنْكَارُ الزِّيَادَةِ عَلَى السُّنَّةِ فِي الْعُطَاسِ وَبِأُسْلُوبٍ حَكِيمٍ لَا يَفْسَحُ الْمَجَالُ لِلْمُخَالِفِ أَنْ يَتَوَهَّمَ أَنَّهُ أَنْكَرَ أَصْلَ مَشْرُوعِيَّةِ مَا أَنْكَرَ، كَمَا يَتَوَهَّمُ بَعْضُ النَّاسِ الْيَوْمَ مِنْ مِثْلِ هَذَا الْإِنْكَارِ.

"ಸೀನಿದ ನಂತರ ಏನು ಹೇಳಬೇಕೆಂಬ ವಿಷಯದಲ್ಲಿ ಸುನ್ನತ್ತಿನಲ್ಲಿ ಬಂದಿರುವುದಕ್ಕೆ ಹೆಚ್ಚುವರಿಯಾಗಿ ಸೇರಿಸುವುದನ್ನು ಇಬ್ನ್

ಉಮರ್(ﷺ)ರವರು ವಿರೋಧಿಸಿದರೆಂಬುದು ದೃಢಪಟ್ಟಿದೆ. ಇಂತಹ ವಿರೋಧವನ್ನು ಕಾಣುವಾಗ ಇಂದಿನ ಕೆಲವು ಜನರು ಭಾವಿಸುವಂತೆ, ತಾನು ಏನನ್ನು ವಿರೋಧಿಸಿದೆನೋ ಅದಕ್ಕೆ ಶರೀಅತ್ತಿನಲ್ಲಿ ಆಧಾರವಿರುವುದನ್ನು ತಾನು ವಿರೋಧಿಸಿದ್ದೇನೆಂದು ಎದುರುವಾದಿಯು ಭಾವಿಸದ ರೀತಿಯಲ್ಲಿ ಅವರು ಯುಕ್ತಿಪೂರ್ಣವಾದ ಶೈಲಿಯಲ್ಲಿ ಅದನ್ನು ವಿರೋಧಿಸಿದರು."

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

وَلَكِنْ فِيمَا بَعْدُ عَلَيْنَا أَنْ نُخْبِرَ أَنَّ الْإِنْسَانَ إِذَا عَطَسَ عَلَيْهِ أَنْ يَقُولَ: الْحَمْدُ لِلَّهِ وَيَكُونُ ذَلِكَ مِنْ بَابِ التَّعْلِيمِ.

"ಆದರೆ ಒಬ್ಬ ವ್ಯಕ್ತಿ ಸೀನಿದರೆ ಅವನು 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳಬೇಕೆಂದು ಅವನಿಗೆ ತಿಳಿಸಿಕೊಡುವುದು ಇದರ ನಂತರ (ಅಂದರೆ ಬಿದ್‌ಅತ್ತನ್ನು ವಿರೋಧಿಸಿದ ನಂತರ) ನಮ್ಮ ಮೇಲೆ ಕಡ್ಡಾಯವಾಗಿದೆ. ಇದು ಕಲಿಸಿಕೊಡುವ ವಿಷಯದಲ್ಲಿ ಸೇರಿದ್ದಾಗಿರಬೇಕು."

## ಸೀನುವವನು ತನ್ನ ಧ್ವನಿಯನ್ನು ತಗ್ಗಿಸುವುದು

ಅಬೂ ಹುರೈರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ:

إِنَّ النَّبِيَّ ﷺ كَانَ إِذَا عَطَسَ وَضَعَ يَدَهُ أَوْ ثَوْبَهُ عَلَى فِيهِ وَخَفَضَ أَوْ غَضَّ بِهَا صَوْتَهُ. رواه الترمذي وحسنه الألباني.

“ಪ್ರವಾದಿ(ﷺ)ರವರು ಸೀನುವಾಗ ತಮ್ಮ ಕೈಯನ್ನು ಅಥವಾ ಬಟ್ಟೆಯನ್ನು ಬಾಯಿಯ ಮೇಲಿಡುತ್ತಿದ್ದರು ಮತ್ತು ಧ್ವನಿಯನ್ನು ತಗ್ಗಿಸಿ ಸೀನುತ್ತಿದ್ದರು.” [ಅತ್ತಿರ್ಮಿದಿ; ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.]

ಅಲ್‌ಹಾಫಿಝ್ ಇಬ್ನ್ ಹಜರ್(ﷺ) ಹೇಳುತ್ತಾರೆ:

مِنْ آدَابِ الْعَاطِسِ أَنْ يَخْفَضَ بِالْعَطْسِ صَوْتَهُ.

“ಸೀನುವಾಗ ಧ್ವನಿಯನ್ನು ತಗ್ಗಿಸುವುದು ಸೀನುವ ಶಿಷ್ಟಾಚಾರಗಳಲ್ಲೊಂದಾಗಿದೆ.”

## ಸೀನುವಾಗ ಬಾಯಿಯನ್ನು ಮುಚ್ಚುವುದು

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

أَنَّهُ يَنْبَغِي لِلْإِنْسَانِ إِذَا عَطَسَ أَنْ يَضَعَ ثَوْبَهُ عَلَى وَجْهِهِ. قَالَ أَهْلُ الْعِلْمِ فِي ذَلِكَ حِكْمَتَانِ: الْحِكْمَةُ الْأُولَى: أَنَّهُ قَدْ يَخْرُجُ مِنْ هَذَا الْعُطَاسِ أَمْرَاضٌ تَنْتَشِرُ عَلَى مَنْ حَوْلَهُ. وَالْحِكْمَةُ الثَّانِيَةُ: أَنَّهُ قَدْ يَخْرُجُ مِنْ أَنْفِهِ شَيْءٌ مُسْتَقْذِرٌ تَتَقَزَّزُ النُّفُوسُ مِنْهُ. فَإِذَا غَطَّى وَجْهَهُ صَارَ ذَلِكَ خَيْرًا.

“ಒಬ್ಬ ವ್ಯಕ್ತಿ ಸೀನುವಾಗ ತನ್ನ ಮುಖವನ್ನು ಬಟ್ಟೆಯಿಂದ ಮುಚ್ಚುವುದು ಅತ್ಯಗತ್ಯವಾಗಿದೆ. ಹೀಗೆ ಮಾಡುವುದರಲ್ಲಿ ಎರಡು ಹಿಕ್ಮತ್‌ಗಳಿವೆಯೆಂದು ಉಲಮಾಗಳು ಹೇಳುತ್ತಾರೆ.

**ಮೊದಲನೆ ಹಿಕ್ಮತ್: ಸೀನುವವನಿಂದ ಅನೇಕ ರೋಗಗಳು ಹೊರಬಂದು ಅವು ಅವನ ಹತ್ತಿರದಲ್ಲಿರುವವರಿಗೆ ಹರಡುವ ಸಾಧ್ಯತೆಯಿದೆ.**

**ಎರಡನೆ ಹಿಕ್ಮತ್: ಸೀನುವಾತನ ಮೂಗಿನಿಂದ ಜನರು ಮುಜುಗರಪಡುವಂತಹ ವಸ್ತುಗಳು ಹೊರ ಬರುವ ಸಾಧ್ಯತೆಯಿದೆ. ಆದ್ದರಿಂದ ಅವನು ತನ್ನ ಮುಖವನ್ನು ಮುಚ್ಚಿಕೊಂಡರೆ ಅದೊಂದು ಒಳಿತಾಗಿದೆ.”**

## ನಮಾಝ್‌ನ ಸಂದರ್ಭದಲ್ಲಿ ಸ್ತುತಿಸುವುದು

ಉಲಮಾಗಳು ಹೇಳುವ ಪ್ರಕಾರ ನಮಾಝ್ ಮಾಡುತ್ತಿರುವ ಸಂದರ್ಭದಲ್ಲಿ ಯಾರಾದರೂ ಸೀನಿದರೆ ಅವನು ಗಟ್ಟಿಸ್ವರದಲ್ಲಿ ಅಲ್ಲಾಹನನ್ನು ಸ್ತುತಿಸಬೇಕು (ಅಂದರೆ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಬೇಕು). ಇದು ಅಹ್ಮದ್, ಅನ್ನವವೀ, ಇಬ್ನ್ ತೈಮಿಯ್ಯಃ ಹಾಗೂ ಬಹುಸಂಖ್ಯಾತ ಸಹಾಬಾಗಳ ಮತ್ತು ತಾಬಿಊನ್‌ಗಳ ಅಭಿಪ್ರಾಯವಾಗಿದೆ. ಆಧುನಿಕ ಉಲಮಾಗಳ ಪೈಕಿ ಅಶ್ಶೈಖ್ ಇಬ್ನ್ ಉಸೈಮೀನ್, ಅಲ್ಲಜ್ನತು ದ್ದಾಇಮಃದ ಉಲಮಾಗಳು ಮೊದಲಾದವರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ.

ಸುನನ್ ಅಬೀ ದಾವೂದ್‌ನಲ್ಲಿರುವ ರಿಫಾಅಃ ಇಬ್ನ್ ರಾಫಿಅ್(ﷺ)ರವರ ಹದೀಸಿನಲ್ಲಿ ಇದು ವರದಿಯಾಗಿದೆ. ಆ ಹದೀಸಿನಲ್ಲಿ ರಿಫಾಅಃ(ﷺ) ಹೇಳುತ್ತಾರೆ:

صَلَّيْتُ خَلْفَ رَسُولِ اللَّهِ ﷺ فَعَطَسَ رِفَاعَةُ فَقُلْتُ: الْحَمْدُ لِلَّهِ حَمْدًا كَثِيرًا طَيِّبًا مُبَارَكًا فِيهِ كَمَا يُحِبُّ رَبُّنَا وَيَرْضَى. فَلَمَّا صَلَّى رَسُولُ اللَّهِ ﷺ انْصَرَفَ فَقَالَ: {لَقَدْ رَأَيْتُ بِضْعَةً وَثَلَاثِينَ مَلَكًا يَبْتَدِرُونَ أَيُّهُمْ يَكْتُبُهَا أَوَّلُ}. رواه أبو داود.

"ನಾನು ಪ್ರವಾದಿ(ﷺ)ರವರ ಹಿಂದೆ ನಮಾಝ್ ಮಾಡುತ್ತಿದ್ದಾಗ ರಿಫಾಅಃ(رضي الله عنه)ರವರು ಸೀನಿದರು. ಆಗ ನಾನು ಹೇಳಿದೆ: ಅಲ್‌ಹಮ್ದು ಲಿಲ್ಲಾಹಿ ಹಮ್ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ ಕಮಾ ಯುಹಿಬ್ಬು ರಬ್ಬುನಾ ವಯರ್ದಾ. ನಮಾಝ್ ಮುಗಿದ ಬಳಿಕ ಪ್ರವಾದಿ(ﷺ)ರವರು ತಿರುಗಿಕೊಂಡು ಹೇಳಿದರು: ಇದನ್ನು ಮೊಟ್ಟಮೊದಲು ಲಿಖಿತಗೊಳಿಸುವುದಕ್ಕಾಗಿ ಮೂವತ್ತಕ್ಕಿಂತಲೂ ಹೆಚ್ಚು ಮಲಕ್‌ಗಳು ಆತುರಪಡುವುದನ್ನು ನಾನು ನೋಡಿದೆ." [ಅಬೂ ದಾವೂದ್]

ನಮಾಝ್ ಮಾಡುವವನು ಸೀನಿದರೆ ಅವನು ಅಲ್ಲಾಹನನ್ನು ಸ್ತುತಿಸಬೇಕೇ? ಎಂದು ಅಶ್ಶೈಖ್ ಇಬ್ನ್ ಉಸೈಮೀನ್(رحمه الله)ರೊಂದಿಗೆ ಕೇಳಲಾದಾಗ ಅವರು ಹೇಳಿದರು:

نَعَمْ، إِذَا عَطَسَ الْمُصَلِّي فَإِنَّهُ يَقُولُ: الْحَمْدُ لِلَّهِ. كَمَا صَحَّ ذَلِكَ فِي قِصَّةِ مُعَاوِيَةَ بْنِ الْحَكَمِ رضي الله عنه أَنَّهُ دَخَلَ مَعَ النَّبِيِّ ﷺ فِي صَلَاةٍ فَعَطَسَ رَجُلٌ مِنَ الْقَوْمِ فَقَالَ: الْحَمْدُ لِلَّهِ. فَقَالَ مُعَاوِيَةُ: يَرْحَمُكَ اللَّهُ.... الْحَدِيثُ. رَوَاهُ مُسْلِمٌ. وَلَمْ يُنْكِرِ النَّبِيُّ ﷺ عَلَى الْعَاطِسِ الَّذِي حَمِدَ اللَّهَ، فَدَلَّ ذَلِكَ عَلَى أَنَّ الْإِنْسَانَ إِذَا عَطَسَ فِي الصَّلَاةِ حَمِدَ اللَّهَ.

**“ಹೌದು, ನಮಾಝ್ ಮಾಡುವವನು ಸೀನಿದರೆ ಅವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳಬೇಕು. ಯಾಕೆಂದರೆ ಇದು ಮುಆವಿಯಾ ಇಬ್ನುಲ್ ಹಕಮ್(ﷺ)ರವರ ಹದೀಸಿನಲ್ಲಿ ದೃಢಪಟ್ಟಿದೆ. ಆ ಹದೀಸಿನಲ್ಲಿರುವಂತೆ ಮುಆವಿಯ(ﷺ)ರವರು ಪ್ರವಾದಿ(ﷺ)ರವರ ಹಿಂದೆ ನಮಾಝ್ ಮಾಡುತ್ತಿದ್ದಾಗ ಜಮಾಅತ್‌ನಲ್ಲಿ ಪಾಲ್ಗೊಂಡ ಒಬ್ಬ ವ್ಯಕ್ತಿ ಸೀನಿದರು ಮತ್ತು ಅಲ್‌ಹಮ್ದುಲಿಲ್ಲಾಹ್ ಎಂದರು. ಇದನ್ನು ಕೇಳಿದಾಗ ಮುಆವಿಯಃ(ﷺ)ರವರು ‘ಯರ್ಹಮುಕಲ್ಲಾಹ್’ ಎಂದರು.... ಈ ಹದೀಸನ್ನು ಮುಸ್ಲಿಮ್ ವರದಿ ಮಾಡಿದ್ದಾರೆ. ಸೀನಿದವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳಿದ್ದನ್ನು ಪ್ರವಾದಿ(ﷺ)ರವರು ವಿರೋಧಿಸಲಿಲ್ಲ. ಆದ್ದರಿಂದ ನಮಾಝ್ ಮಾಡುವ ಸಂದರ್ಭದಲ್ಲಿ ಯಾರಾದರೂ ಸೀನಿದರೆ ಅವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳಬೇಕೆಂಬುದಕ್ಕೆ ಇದರಲ್ಲಿ ಸೂಚನೆಯಿದೆ.”**

## ಸೀನಿದವನಿಗೆ ತಶ್ಮೀತ್ ಮಾಡುವುದರ ವಿಧಿ

ಸೀನಿದವನು ಅಲ್ಲಾಹನನ್ನು ಸ್ತುತಿಸಿದರೆ, ಅದನ್ನು ಆಲಿಸಿದ ಎಲ್ಲರ ಮೇಲೂ ಅವನಿಗೋಸ್ಕರ ತಶ್ಮೀತ್ ಮಾಡುವುದು (ಯರ್ಹಮುಕಲ್ಲಾಹ್ ಎಂದು ಹೇಳುವುದು) ಫರ್ದ್ ಐನ್ (ವೈಯುಕ್ತಿಕ ಕಡ್ಡಾಯ) ಆಗಿದೆಯೆಂದು ಉಲಮಾಗಳು ಅಭಿಪ್ರಾಯ ಪಟ್ಟಿದ್ದಾರೆ.

ಇಬ್ನ್ ದಕೀಕ್ ಅಲ್‌ಈದ್(رحمه الله) ಹೇಳುತ್ತಾರೆ:

ظَاهِرُ الْأَمْرِ الْوُجوبُ وَيُؤَيِّدُهُ حَدِيثُ: «فَحَقٌّ عَلَى كُلِّ مُسْلِمٍ أَنْ يُشَمِّتَهُ».

**“ಹದೀಸಿನಲ್ಲಿರುವ ಆಜ್ಞೆಯ ಬಾಹ್ಯಾರ್ಥದ ಪ್ರಕಾರ ತಶ್ಮೀತ್ ಮಾಡುವುದು ಕಡ್ಡಾಯವಾಗಿದೆ. ‘ಅವನಿಗೆ ತಶ್ಮೀತ್ ಮಾಡುವುದು ಎಲ್ಲ ಮುಸ್ಲಿಮರ ಮೇಲೂ ಹಕ್ಕಾಗಿದೆ’ ಎಂಬ ಹದೀಸ್ ಕೂಡ ಇದನ್ನು ಬಲಪಡಿಸುತ್ತದೆ.”**

ಅಲ್ಅಲ್ಬಾನೀ(ﷺ) ಹೇಳುತ್ತಾರೆ:

هَذَا نَصٌّ صَرِيحٌ فِي وُجُوبِ التَّشْمِيتِ عَلَى كُلِّ مَنْ سَمِعَ تَحْمِيدَهُ، فَهُوَ فَرْضُ عَيْنٍ عَلَى الْكُلِّ.

**“ಸೀನಿದವನು ಅಲ್‌ಹಮ್ದುಲಿಲ್ಲಾಹ್ ಹೇಳುವುದನ್ನು ಕೇಳಿದ ಎಲ್ಲರ ಮೇಲೂ ಅವನಿಗೆ ತಶ್ಮೀತ್ ಮಾಡುವುದು (ಯರ್ಹಮುಕಲ್ಲಾಹ್ ಎಂದು ಹೇಳುವುದು) ಕಡ್ಡಾಯವಾಗಿದೆ ಎಂಬುದಕ್ಕೆ ಈ ಹದೀಸಿನಲ್ಲಿ (ಅಂದರೆ ಅವನಿಗೆ ತಶ್ಮೀತ್ ಮಾಡುವುದು ಎಲ್ಲ ಮುಸ್ಲಿಮರ ಮೇಲೂ ಹಕ್ಕಾಗಿದೆಯೆಂಬ ಹದೀಸ್‌ನಲ್ಲಿ) ಸ್ಪಷ್ಟವಾದ ಪುರಾವೆಯಿದೆ. ಆದ್ದರಿಂದ ಇದು ಎಲ್ಲರ ಮೇಲೂ ಫರ್ದ್ ಐನ್ ಆಗಿದೆ.”**

ಅಶ್ಶೈಖ್ ಇಬ್ನ್ ಉಸೈಮೀನ್(ﷺ) ಹೇಳುತ್ತಾರೆ:

«كَانَ حَقًّا عَلَى كُلِّ مَنْ سَمِعَهُ» ظَاهِرُهُ أَنَّهُ يَجِبُ عَلَى كُلِّ السَّامِعِينَ بِأَعْيَانِهِمْ وَيُؤَيِّدُهُ قَوْلُهُ فِي الْحَدِيثِ الْآخَرِ: «إِذَا عَطَسَ أَحَدُكُمْ فَحَمِدَ اللَّهَ فَشَمِّتُوهُ».

**“ಅದನ್ನು (ಸ್ತುತಿಯನ್ನು) ಆಲಿಸಿದ ಎಲ್ಲರ ಮೇಲೂ ತಶ್ಮೀತ್ ಮಾಡುವುದು ಹಕ್ಕಾಗಿದೆ ಎಂಬ ಹದೀಸಿನ ಬಾಹ್ಯಾರ್ಥ ಪ್ರಕಾರ ಅದನ್ನು**

**ಆಲಿಸಿದವರೆಲ್ಲರ ಮೇಲೂ ತಶ್ಮೀತ್ ಮಾಡುವುದು ಫರ್ದ್ ಐನ್ ಆಗಿದೆ. ನಿಮ್ಮಲ್ಲೊಬ್ಬರು ಸೀನಿದ ನಂತರ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರೆ ಅವನಿಗೆ ತಶ್ಮೀತ್ ಮಾಡಿರಿ ಎಂಬ ಹದೀಸ್ ಕೂಡ ಇದನ್ನು ಬಲಪಡಿಸುತ್ತದೆ.”**

## ತಶ್ಮೀತ್ ಮಾಡುವ ವಿಧಾನ

ಸೀನಿದವನು ಸೀನಿದ ಬಳಿಕ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರೆ ಅದನ್ನು ಕೇಳಿದವನು ತಶ್ಮೀತ್ ಮಾಡುವುದು (ಯರ್ಹಮುಕಲ್ಲಾಹ್ ಎಂದು ಹೇಳುವುದು) ಕಡ್ಡಾಯವಾಗಿದೆ. ಸುನ್ನತ್ತಿನಲ್ಲಿ ಬಂದಿರುವ ಪ್ರಕಾರ ತಶ್ಮೀತ್ ಮಾಡುವುದು ‘ಯರ್ಹಮುಕಲ್ಲಾಹ್’ ಎಂದು ಹೇಳುವ ಮೂಲಕ ಮಾತ್ರವಾಗಿದೆ. ಇದಲ್ಲದೆ ಬೇರೆ ಯಾವುದೇ ವಿಧಾನದಲ್ಲೂ ತಶ್ಮೀತ್ ಮಾಡುವ ರೂಪವು ಸುನ್ನತ್ತಿನಲ್ಲಿ ವರದಿಯಾಗಿಲ್ಲ. ಆದ್ದರಿಂದ ನಾವು ‘ಯರ್ಹಮುಕಲ್ಲಾಹ್’ ಎಂದು ಹೇಳುವ ಮೂಲಕ ಮಾತ್ರ ತಶ್ಮೀತ್ ಮಾಡಬೇಕಾಗಿದೆ. ಯಾಕೆಂದರೆ ತಶ್ಮೀತ್ ಮಾಡುವುದು ಒಂದು ಇಬಾದತ್ ಆಗಿದೆ. ಇಬಾದತ್‌ಗಳೆಲ್ಲವೂ ತೌಕೀಫಿಯ್ಯಃ ಆಗಿದೆ. ಪುರಾವೆಯಿಲ್ಲದ ಯಾವುದೇ ಇಬಾದತ್‌ನ ಮೂಲಕವೂ ಅಲ್ಲಾಹನನ್ನು ಆರಾಧಿಸುವಂತಿಲ್ಲ.

ಅಬೂ ಹುರೈರಃ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

**{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ. وَلْيَقُلْ لَهُ أَخُوهُ أَوْ صَاحِبُهُ: يَرْحَمُكَ اللَّهُ}.** رواه البخاري

**“ನಿಮ್ಮಲ್ಲೊಬ್ಬರು ಸೀನಿದರೆ ಅವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳಲಿ. ಆಗ ಅವನ ಸಹೋದರನು ಅಥವಾ ಸಂಗಡಿಗನು: ‘ಯರ್ಹಮುಕಲ್ಲಾಹ್’ ಎಂದು ಹೇಳಲಿ.”** [ಅಲ್‌ಬುಖಾರಿ]

## ಎಷ್ಟು ಬಾರಿ ತಶ್ಮೀತ್ ಮಾಡಬೇಕು?

ಸೀನಿದವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳಿದರೆ ಅವನಿಗೆ ತಶ್ಮೀತ್ ಮಾಡುವುದು, ಅಂದರೆ ‘ಯರ್ಹಮುಕಲ್ಲಾಹ್’ ಎಂದು ಹೇಳುವುದು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ದೃಢಪಟ್ಟಿದೆ. ಆದರೆ ಅದು ಹೇಳುತ್ತಲೇ ಇರಬೇಕಾದುದಲ್ಲ. ಬದಲಾಗಿ ಅದಕ್ಕೆ ನಿಶ್ಚಿತ ಸಂಖ್ಯೆಯಿದೆ. ಸೀನುವವನು ಆ ಸಂಖ್ಯೆಯನ್ನು ಮೀರಿದರೆ ಮತ್ತೆ ಅವನಿಗೋಸ್ಕರ ತಶ್ಮೀತ್ ಮಾಡಬೇಕಾಗಿಲ್ಲ.

ಉದಾಹರಣೆಗೆ, ಒಬ್ಬ ವ್ಯಕ್ತಿ ಒಂದು ಬಾರಿ ಸೀನಿ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಮಾಡಬೇಕು. ಅದೇ ವ್ಯಕ್ತಿ ಎರಡನೆ ಬಾರಿ ಸೀನಿ ಸ್ತುತಿಸಿದರೆ ಪುನಃ ಅವನಿಗೆ ತಶ್ಮೀತ್ ಮಾಡಬಹುದು. ಆ ವ್ಯಕ್ತಿ ಮೂರನೆ ಬಾರಿ ಸೀನಿ ಸ್ತುತಿಸಿದರೆ ಪುನಃ ಅವನಿಗೆ ತಶ್ಮೀತ್ ಮಾಡಬಹುದು. ಆದರೆ ಆ ವ್ಯಕ್ತಿ ನಾಲ್ಕನೆ ಬಾರಿ ಸೀನಿ ಸ್ತುತಿಸಿದರೆ ಅವನಿಗೆ ತಶ್ಮೀತ್ ಮಾಡಬೇಕಾಗಿಲ್ಲ.

ಅಬೂ ಹುರೈರಃ(رضي الله عنه)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيُشَمِّتْهُ جَلِيسُهُ، فَإِنْ زَادَ عَلَى ثَلَاثٍ فَهُوَ مَزْكُومٌ، لَا تَشْمِيتَ بَعْدَ ثَلَاثٍ}. رواه أبو داود وصححه الألباني

**“ನಿಮ್ಮಲ್ಲೊಬ್ಬನು ಸೀನಿದರೆ ಅವನ ಸಮೀಪವಿರುವವನು ಅವನಿಗೋಸ್ಕರ ತಶ್ಮೀತ್ ಮಾಡಲಿ (ಅಂದರೆ ಯರ್ಹಮುಕಲ್ಲಾಹ್ ಎಂದು ಹೇಳಲಿ). ಆದರೆ ಅವನು ಮೂರಕ್ಕಿಂತ ಹೆಚ್ಚು ಬಾರಿ ಸೀನಿದರೆ ಅವನು ನೆಗಡಿಯುಳ್ಳವನಾಗಿದ್ದಾನೆ. ಮೂರಕ್ಕಿಂತ ಹೆಚ್ಚು ಬಾರಿ ಸೀನಿದರೆ ತಶ್ಮೀತ್ ಮಾಡಬೇಕಾಗಿಲ್ಲ.” [ಅಬೂ ದಾವೂದ್; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]**

ಅಬೂ ಹುರೈರಃ(ﷺ) ಹೇಳುತ್ತಾರೆ:

**شَمِّتْهُ وَاحِدَةً وَثِنْتَيْنِ وَثَلَاثًا، فَمَا كَانَ بَعْدَ هَذَا فَهُوَ زُكَامٌ.** رواه البخاري في الأدب المفرد وصححه الألباني

**“ಅಂದರೆ ಒಂದು ಬಾರಿ, ಎರಡು ಬಾರಿ ಮತ್ತು ಮೂರು ಬಾರಿ ತಶ್ಮೀತ್ ಮಾಡು. ಆತ ಇನ್ನೂ ಹೆಚ್ಚು ಸೀನುವುದಾದರೆ ಅದು ನೆಗಡಿಯಾಗಿದೆ.” [ಅಲ್‌ಅದಬುಲ್ ಮುಫ್ರದ್; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]**

ಸಲಮಃ ಇಬ್ನುಲ್ ಅಕ್ವಲ್(ﷺ) ಹೇಳುತ್ತಾರೆ:

**عَطَسَ رَجُلٌ عِنْدَ رَسُولِ اللَّهِ ﷺ وَأَنَا شَاهِدٌ فَقَالَ رَسُولُ اللَّهِ ﷺ: «يَرْحَمُكَ اللَّهُ». ثُمَّ عَطَسَ الثَّانِيَةَ فَقَالَ رَسُولُ اللَّهِ ﷺ: «يَرْحَمُكَ اللَّهُ». إِلَّا أَنَّهُ قَالَ فِي الثَّالِثَةِ: «أَنْتَ مَزْكُومٌ».** رواه الترمذي وصححه الألباني.

**“ಪ್ರವಾದಿ(ﷺ)ರವರ ಬಳಿ ಒಬ್ಬ ವ್ಯಕ್ತಿ ಸೀನಿದಾಗ ನಾನು ಅಲ್ಲಿ ಉಪಸ್ಥಿತನಾಗಿದ್ದೆ. ಆಗ ಪ್ರವಾದಿ(ﷺ)ರವರು ‘ಯರ್ಹಮುಕಲ್ಲಾಹ್’ ಎಂದು ಹೇಳಿದರು. ಆ ವ್ಯಕ್ತಿ ಎರಡನೆ ಬಾರಿ ಸೀನಿದಾಗಲೂ ಪ್ರವಾದಿ(ﷺ)ರವರು**

**‘ಯರ್ಹಮುಕಲ್ಲಾಹ್’ ಎಂದರು. ಆದರೆ ಆ ವ್ಯಕ್ತಿ ಮೂರನೆ ಬಾರಿ ಸೀನಿದಾಗ ಪ್ರವಾದಿ(ﷺ)ರವರು ಹೇಳಿದರು: “ನಿನಗೆ ನೆಗಡಿಯಾಗಿದೆ.” [ಅತ್ತಿರ್ಮಿದಿ; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]**

## ಸೀನಿದವನಿಗೆ ತಶ್ಮೀತ್ ಮಾಡಲಾದರೆ ಅವನು ಏನು ಹೇಳಬೇಕು?

ಈ ವಿಷಯದಲ್ಲಿ ಎರಡು ರೀತಿಯ ಪ್ರಾರ್ಥನೆಗಳು ಸುನ್ನತ್ತಿನಲ್ಲಿ ವರದಿಯಾಗಿದೆ:

1. “ಯಗ್ಫಿರುಲ್ಲಾಹು ಲನಾ ವಲಕುಮ್” (ಅಲ್ಲಾಹು ನಮಗೂ ನಿಮಗೂ ಕ್ಷಮಿಸಲಿ) ಎಂದು ಹೇಳುವುದು:

ಅಬೂ ಮಸ್‌ಊದ್(ರ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ رَبِّ الْعَالَمِينَ، وَيُقَالُ لَهُ: يَرْحَمُكَ اللَّهُ، وَلْيَقُلْ هُوَ: يَغْفِرُ اللَّهُ لَنَا وَلَكُمْ}. رواه الطبراني وصححه الألباني.

**“ನಿಮ್ಮಲ್ಲೊಬ್ಬನು ಸೀನಿದರೆ ಅವನು ‘ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್’ ಎಂದು ಹೇಳಲಿ. ಆಗ ಅವನಿಗೆ ಬೇರೊಬ್ಬನು ‘ಯರ್ಹಮುಕಲ್ಲಾಹ್’ ಎಂದು ಹೇಳಲಿ. ಆಗ ಅವನು ‘ಯಗ್ಫಿರುಲ್ಲಾಹು ಲನಾ ವಲಕುಮ್’ ಎಂದು ಹೇಳಲಿ.” [ಅತ್ತಬರಾನೀ; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]**

2. “ಯಹ್ದೀಕುಮುಲ್ಲಾಹು ವಯುಸ್ಲಿಹು ಬಾಲಕುಮ್” (ಅಲ್ಲಾಹು ನಿಮಗೆ ಮಾರ್ಗದರ್ಶನ ಮಾಡಲಿ ಮತ್ತು ನಿಮ್ಮ ಸ್ಥಿತಿಯನ್ನು ಸುಧಾರಣೆಗೊಳಿಸಲಿ) ಎಂದು ಹೇಳುವುದು:

ಅಬೂ ಹುರೈರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَلْيَقُلْ: الْحَمْدُ لِلَّهِ...، فَإِذَا قَالَ لَهُ: يَرْحَمُكَ اللَّهُ، فَلْيَقُلْ هُوَ: يَهْدِيكُمُ اللَّهُ وَيُصْلِحُ بَالَكُمْ}. رواه البخاري

**“ನಿಮ್ಮಲ್ಲೊಬ್ಬನು ಸೀನಿದರೆ ಅವನು ‘ಅಲ್‌ಹಮ್ದುಲಿಲ್ಲಾಹಿ’ ಎಂದು ಹೇಳಲಿ... ಆಗ ಅವನಿಗೆ ಬೇರೊಬ್ಬನು ‘ಯರ್ಹಮುಕಲ್ಲಾಹ್’ ಎಂದು ಹೇಳಿದರೆ, ಅವನು ‘ಯಹ್ದೀಕುಮುಲ್ಲಾಹು ವಯುಸ್ಲಿಹು ಬಾಲಕುಮ್’ ಎಂದು ಹೇಳಲಿ.” [ಅಲ್‌ಬುಖಾರೀ]**

ಇವುಗಳಲ್ಲದೆ ಬೇರೆ ರೀತಿಗಳಲ್ಲಿ ಸಹಾಬಾಗಳು ತಶ್ಮೀತ್‌ಗೆ ಉತ್ತರಿಸುತ್ತಿದ್ದರೆಂಬುದು ವರದಿಯಾಗಿದೆ. ಅವುಗಳು ಹೀಗಿವೆ:

1. ತಶ್ಮೀತ್ ಮಾಡಿದವನಿಗೆ (ಯರ್ಹಮುಕಲ್ಲಾಹ್ ಎಂದು ಹೇಳಿದವನಿಗೆ) ಉತ್ತರವಾಗಿ ಇಬ್ನ್ ಅಬ್ಬಾಸ್(ﷺ)ರವರು ಹೀಗೆ ಹೇಳುತ್ತಿದ್ದರು:

عَافَانَا اللَّهُ وَإِيَّاكُمْ مِنَ النَّارِ وَيَرْحَمُكُمُ اللَّهُ.

**“ಆಫಾನಲ್ಲಾಹು ವಇಯ್ಯಾಕುಮ್ ಮಿನ ನ್ನಾರಿ ವಯರ್ಹಮು ಕುಮುಲ್ಲಾಹ್” (ಅಲ್ಲಾಹು ನಮ್ಮನ್ನೂ ನಿಮ್ಮನ್ನೂ ನರಕಾಗ್ನಿಯಿಂದ ರಕ್ಷಿಸಲಿ ಮತ್ತು ಅಲ್ಲಾಹು ನಿಮ್ಮ ಮೇಲೆ ಕರುಣೆ ತೋರಲಿ). [ಅಲ್‌ಬುಖಾರೀ]**

2. ಇಬ್ನ್ ಉಮರ್(ﷺ)ರವರು ಹೀಗೆನ್ನುತ್ತಿದ್ದರು:

يَغْفِرُ اللَّهُ لِي وَلَكُمْ

**“ಯಗ್ಫಿರುಲ್ಲಾಹು ಲೀ ವಲಕುಮ್” (ಅಲ್ಲಾಹು ನನಗೂ ನಿಮಗೂ ಕ್ಷಮಿಸಲಿ) [ಅಲ್‌ಬುಖಾರೀ]**

3. ಇಬ್ನ್ ಉಮರ್(ﷺ)ರವರು ಕೆಲವೊಮ್ಮೆ ಹೀಗೆನ್ನುತ್ತಿದ್ದರು:

يَرْحَمُنَا اللَّهُ وَإِيَّاكُمْ وَيَغْفِرُ اللَّهُ لَنَا وَلَكُمْ

**“ಯರ್ಹಮುನಲ್ಲಾಹು ವಇಯ್ಯಾಕುಮ್ ವಯಗ್ಫಿರುಲ್ಲಾಹು ಲನಾ ವಲಕುಮ್” (ಅಲ್ಲಾಹು ನಮಗೂ ನಿಮಗೂ ಕರುಣೆ ತೋರಲಿ ಮತ್ತು ಅಲ್ಲಾಹು ನಮಗೂ ನಿಮಗೂ ಕ್ಷಮಿಸಲಿ) [ಅಲ್‌ಬುಖಾರೀ]**

## ಸೀನಿದವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳದಿದ್ದರೆ ಅವನಿಗೆ ತಶ್ಮೀತ್ ಮಾಡಬಹುದೇ?

ಒಬ್ಬ ವ್ಯಕ್ತಿ ಸೀನಿದಾಗಲೆಲ್ಲ ಅವನಿಗೆ ತಶ್ಮೀತ್ ಮಾಡಬಾರದು. ಬದಲಾಗಿ ಅವನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸಿದರೆ ಮಾತ್ರ ಅವನಿಗೆ ತಶ್ಮೀತ್ ಮಾಡಬೇಕು (ಯರ್ಹಮುಕಲ್ಲಾಹ್ ಎಂದು ಹೇಳಬೇಕು). ಅವನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸದಿದ್ದರೆ ಅವನಿಗೆ ತಶ್ಮೀತ್ ಮಾಡಬಾರದು.

ಅಬೂ ಮೂಸಾ ಅಲ್‌ಅಶ್‌ಅರೀ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ:

{إِذَا عَطَسَ أَحَدُكُمْ فَحَمِدَ اللَّهَ فَشَمِّتُوهُ، فَإِنْ لَمْ يَحْمَدِ اللَّهَ فَلَا تُشَمِّتُوهُ}. رواه مسلم

**“ನಿಮ್ಮಲ್ಲೊಬ್ಬನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಮಾಡಿರಿ (ಯರ್ಹಮುಕಲ್ಲಾಹ್ ಎಂದು ಹೇಳಿರಿ). ಅವನು ಅಲ್ಲಾಹನನ್ನು ಸ್ತುತಿಸದಿದ್ದರೆ ಅವನಿಗೆ ತಶ್ಮೀತ್ ಮಾಡಬೇಡಿರಿ.” [ಮುಸ್ಲಿಮ್]**

ಅನಸ್ ಇಬ್ನ್ ಮಾಲಿಕ್(ﷺ)ರಿಂದ ವರದಿ: ಅವರು ಹೇಳುತ್ತಾರೆ:

عَطَسَ عِنْدَ النَّبِيِّ ﷺ رَجُلَانِ فَشَمَّتَ أَحَدَهُمَا وَلَمْ يُشَمِّتِ الْآخَرَ، فَقَالَ الَّذِي لَمْ يُشَمِّتْهُ: عَطَسَ فُلَانٌ فَشَمَّتَّهُ، وَعَطَسْتُ أَنَا فَلَمْ تُشَمِّتْنِي، فَقَالَ: {إِنَّ هَذَا حَمِدَ اللَّهَ وَإِنَّكَ لَمْ تَحْمَدِ اللَّهَ}. رواه البخاري ومسلم

**“ಒಮ್ಮೆ ಪ್ರವಾದಿ(ﷺ)ರವರ ಬಳಿ ಇಬ್ಬರು ವ್ಯಕ್ತಿಗಳು ಸೀನಿದರು. ಆಗ ಪ್ರವಾದಿ(ﷺ)ರವರು ಅವರಲ್ಲೊಬ್ಬರಿಗೆ ತಶ್ಮೀತ್ ಮಾಡಿದರು**

(ಯರ್ಹಮುಕಲ್ಲಾಹ್ ಎಂದು ಹೇಳಿದರು). ಆದರೆ ಇನ್ನೊಬ್ಬರಿಗೆ ತಶ್ಮೀತ್ ಮಾಡಲಿಲ್ಲ. ಆಗ ಆ ವ್ಯಕ್ತಿ ಹೇಳಿದರು: ಇಂತಿಂತಹವರು ಸೀನಿದಾಗ ತಾವು ತಶ್ಮೀತ್ ಮಾಡಿದಿರಿ. ಆದರೆ ನಾನು ಸೀನಿದಾಗ ನೀವು ತಶ್ಮೀತ್ ಮಾಡಲಿಲ್ಲ. ಆಗ ಪ್ರವಾದಿ(ﷺ)ರವರು ಹೇಳಿದರು: ಅವರು ಅಲ್ಲಾಹನನ್ನು ಸ್ತುತಿಸಿದರು, ಆದರೆ ತಾವು ಅಲ್ಲಾಹನನ್ನು ಸ್ತುತಿಸಲಿಲ್ಲ." [ಅಲ್‌ಬುಖಾರಿ ಮತ್ತು ಮುಸ್ಲಿಮ್]

ಅಬೂ ಹುರೈರಃ(﵁)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

{... فَإِذَا عَطَسَ أَحَدُكُمْ وَحَمِدَ اللَّهَ تَعَالَى كَانَ حَقًّا عَلَى كُلِّ مُسْلِمٍ سَمِعَهُ أَنْ يَقُولَ: يَرْحَمُكَ اللَّهُ}. رواه البخاري

"...ನಿಮ್ಮಲ್ಲೊಬ್ಬನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸಿದರೆ ಅದನ್ನು ಆಲಿಸಿದ ಎಲ್ಲ ಮುಸ್ಲಿಮರ ಮೇಲೂ 'ಯರ್ಹಮುಕಲ್ಲಾಹ್' ಎಂದು ಹೇಳುವುದು ಹಕ್ಕಾಗಿದೆ." [ಅಲ್‌ಬುಖಾರೀ]

ಅಲ್‌ಬಗವೀ(﵀) ಹೇಳುತ್ತಾರೆ:

فِي الْحَدِيثِ بَيَانٌ أَنَّ الْعَاطِسَ إِذَا لَمْ يَحْمَدِ اللَّهَ فَلَا يَسْتَحِقُّ التَّشْمِيتَ.

"ಸೀನಿದವನು ಅಲ್ಲಾಹನನ್ನು ಸ್ತುತಿಸದಿದ್ದರೆ ತಶ್ಮೀತ್ ಮಾಡಿಸಿಕೊಳ್ಳುವ ಯೋಗ್ಯತೆ ಅವನಿಗಿಲ್ಲವೆಂದು ಈ ಹದೀಸಿನಲ್ಲಿ ವಿವರಿಸಲಾಗಿದೆ."

ಅಬುತ್ತಯ್ಯಿಬ್ ಅಲ್‌ಅಝೀಮಾಬಾದಿ(﵀) ಹೇಳುತ್ತಾರೆ:

وَفِيهِ بَيَانٌ أَنَّ الْعَاطِسَ إِذَا لَمْ يَحْمَدِ اللَّهَ لَا يَسْتَحِقُّ الْجَوَابَ.

**“ಸೀನಿದವನು ಅಲ್ಲಾಹನನ್ನು ಸ್ತುತಿಸದಿದ್ದರೆ ಉತ್ತರ ಪಡೆಯುವ ಯೋಗ್ಯತೆ ಅವನಿಗಿಲ್ಲವೆಂದು ಈ ಹದೀಸಿನಲ್ಲಿ ವಿವರಿಸಲಾಗಿದೆ.”**

# ಪುರುಷನು ಮಹಿಳೆಗೆ ಮತ್ತು ಮಹಿಳೆ ಪುರುಷನಿಗೆ ತಶ್ಮೀತ್ ಮಾಡುವುದು

ಸೀನಿದವನು ಪುರುಷನಾಗಿದ್ದು ಅವನು ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ‘ಯರ್ಹಮುಕಲ್ಲಾಹ್’ ಎಂದು ಹೇಳುವುದಕ್ಕೆ ಮಹಿಳೆಗೆ ಅನುಮತಿಯಿದೆ. ಹಾಗೆಯೇ ಸೀನಿದವಳು ಮಹಿಳೆಯಾಗಿದ್ದು ಆಕೆ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಆಕೆಗೆ ‘ಯರ್ಹಮುಕಲ್ಲಾಹ್’ ಎಂದು ಹೇಳುವುದಕ್ಕೆ ಪುರುಷನಿಗೆ ಅನುಮತಿಯಿದೆ.

ಇದಕ್ಕಿರುವ ಪುರಾವೆಗಳು ಹೀಗಿವೆ:

1. ಪ್ರವಾದಿ(ﷺ)ರವರು ಹೇಳಿದರು:

{إِذَا عَطَسَ أَحَدُكُمْ فَحَمِدَ اللَّهَ فَشَمِّتُوهُ وَإِذَا لَمْ يَحْمَدِ اللَّهَ فَلَا تُشَمِّتُوهُ}.

**“ನಿಮ್ಮಲ್ಲೊಬ್ಬನು ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಮಾಡಿರಿ. ಆದರೆ ಅವನು ಅಲ್ಲಾಹನನ್ನು ಸ್ತುತಿಸದಿದ್ದರೆ ಅವನಿಗೆ ತಶ್ಮೀತ್ ಮಾಡಬೇಡಿರಿ.”**

ಈ ಹದೀಸಿನಲ್ಲಿರುವ ಪ್ರವಾದಿ(ﷺ)ರವರ ಆಜ್ಞೆಯು ಪುರುಷರಿಗೆ ಮತ್ತು ಮಹಿಳೆಯರಿಗಿರುವ ಸಾರ್ವತ್ರಿಕ ಆಜ್ಞೆಯಾಗಿದೆ. ಈ ಕಾರಣದಿಂದಲೇ ಬಿನ್ತುಲ್ ಫಳ್ಲ್ (ಅಬೂ ಮೂಸಾರವರ ಪತ್ನಿ) ಸೀನಿದಾಗ ಅಬೂ

ಮೂಸಾ(ﷺ)ರವರು ಆಕೆಗೆ ತಶ್ಮೀತ್ ಮಾಡಿದರು. ಪುರುಷರು ಸೀನಿದರೆ ಮಾತ್ರ ತಶ್ಮೀತ್ ಮಾಡಬೇಕೆಂದು ಈ ಹದೀಸಿನಲ್ಲಿ ಹೇಳಲಾಗಿಲ್ಲ. ಬದಲಾಗಿ ಆ ಆಜ್ಞೆಯಲ್ಲಿ ಪುರುಷರೂ ಮಹಿಳೆಯರೂ ಒಳಗೊಳ್ಳುತ್ತಾರೆ.

2. ಮೂಲಭೂತ ನಿಯಮದ ಪ್ರಕಾರ ಶರೀಅತ್ತಿನ ಎಲ್ಲ ನಿಯಮಗಳೂ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನವಾಗಿ ಬಾಧಕವಾಗುತ್ತದೆ. ಆದರೆ ಕೆಲವು ನಿಯಮಗಳಲ್ಲಿ ಮಹಿಳೆಯರಿಗೆ ವಿನಾಯಿತಿಯಿದೆಂಬುದಕ್ಕೆ ಪುರಾವೆಯಿರುವ ಹೊರತು. ಆದರೆ ಅಂತಹ ಯಾವುದೇ ಪುರಾವೆಗಳು ಈ ವಿಷಯದಲ್ಲಿಲ್ಲ. ಆದ್ದರಿಂದ ಈ ನಿಯಮವು ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನವಾಗಿ ಬಾಧಕವಾಗುತ್ತದೆ.

3. ಪುರುಷರು ಮಹಿಳೆಯರಿಗೆ ಮತ್ತು ಮಹಿಳೆಯರು ಪುರುಷರಿಗೆ ತಶ್ಮೀತ್ ಮಾಡಲು ಅನುಮತಿಯಿರುವುದು ಫಿತ್ನವನ್ನು ಭಯಪಡದಿರುವ ಸಂದರ್ಭದಲ್ಲಿ ಮಾತ್ರವಾಗಿದೆ. ತಶ್ಮೀತ್ ಮಾಡಿದರೆ ಫಿತ್ನವುಂಟಾಗಬಹುದು ಎಂದು ಭಯಪಡುವ ಸಂದರ್ಭಗಳಲ್ಲಿ ಮಹಿಳೆಯರು ಪುರುಷರಿಗಾಗಲಿ, ಪುರುಷರು ಮಹಿಳೆಯರಿಗಾಗಲಿ ತಶ್ಮೀತ್ ಮಾಡಬಾರದು. ಅಲ್ಲಾಹು ಅಅ್‌ಲಮ್.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

# ಪರಿವಿಡಿ


| م | العنوان | الصفحة |
|---|---|---|
| 1 | ಆಕಳಿಕೆ ಮತ್ತು ಸೀನು 1 | **1** |
| 2 | ಆಕಳಿಸುವುದಕ್ಕಿರುವ ಕಾರಣಗಳು | **2** |
| 3 | ಆಕಳಿಸುವುದು ಕರಾಹತ್ ಆಗಿರುವುದಕ್ಕಿರುವ ಕಾರಣಗಳು | **4** |
| 4 | ಆಕಳಿಸುವಾಗ ಏನು ಮಾಡಬೇಕು? | **6** |
| 5 | ಸೀನು | **9** |
| 6 | ಗಟ್ಟಿಯಾಗಿ ಸ್ತುತಿಸುವುದು ಪ್ರೋತ್ಸಾಹನೀಯ | **10** |
| 7 | ಸ್ತುತಿಸುವ ರೂಪಗಳು | **12** |
| 8 | ಅಲ್ಲಾಹನನ್ನು ಸ್ತುತಿಸುವುದರಲ್ಲಿರುವ ಹಿಕ್ಮತ್ | **14** |
| 9 | ಹೆಚ್ಚುವರಿಯಾಗಿ ಸ್ತುತಿಸುವುದು | **16** |
| 10 | ಸೀನುವವನು ತನ್ನ ಧ್ವನಿಯನ್ನು ತಗ್ಗಿಸುವುದು | **18** |
| 11 | ಸೀನುವಾಗ ಬಾಯಿಯನ್ನು ಮುಚ್ಚುವುದು | **19** |
| 12 | ನಮಾಝ್‌ನ ಸಂದರ್ಭದಲ್ಲಿ ಸ್ತುತಿಸುವುದು | **20** |
| 13 | ಸೀನಿದವನಿಗೆ ತಶ್ಮೀತ್ ಮಾಡುವುದರ ವಿಧಿ | **22** |
| 14 | ತಶ್ಮೀತ್ ಮಾಡುವ ವಿಧಾನ | **24** |
| 15 | ಎಷ್ಟು ಬಾರಿ ತಶ್ಮೀತ್ ಮಾಡಬೇಕು? | **25** |
| 16 | ಸೀನಿದವನಿಗೆ ತಶ್ಮೀತ್ ಮಾಡಲಾದರೆ ಅವನು ಏನು ಹೇಳಬೇಕು? | **27** |
| 17 | ಸೀನಿದವನು ‘ಅಲ್‌ಹಮ್ದುಲಿಲ್ಲಾಹ್’ ಎಂದು ಹೇಳದಿದ್ದರೆ ಅವನಿಗೆ ತಶ್ಮೀತ್ ಮಾಡಬಹುದೇ? | **29** |
| 18 | ಪುರುಷನು ಮಹಿಳೆಗೆ ಮತ್ತು ಮಹಿಳೆ ಪುರುಷನಿಗೆ ತಶ್ಮೀತ್ ಮಾಡುವುದು | **32** |

IslamHouse.com